**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: **2015-16ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನಿಲ ಯೋಜನೆಯಡಿ **2014-15ನೇ** ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನ ಬಿಡುಗಡೆ ಕುರಿತು

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 53 ಜೈಅಯೋ 2015, ದಿನಾಂಕ 11.11.2015 & 18.11.2015

## ಪ್ರಸ್ತಾವನೆ :

**2015-16ನೇ** ಸಾಲಿನ ರಾಜ್ಯ ಆಯವ್ಯಯದ **ಲೆಕ್ಕ ಶೀರ್ಷಿಕೆ 2810-01-198-1-01-300 (Lumpsum)** ರಡಿಯಲ್ಲಿ **ರೂ.120.00** ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಜೈವಾನಿಲ ಸ್ಥಾವರಗಳಿಗೆ ಹಿಂದಿನ ಸಾಲುಗಳ ಬಾಕಿ ರಾಜ್ಯ ಸಹಾಯಧನ ಪಾವತಿಗಾಗಿ **ಅನಿಲ ಯೋಜನೆಯಡಿ** ನಿಗದಿಪಡಿಸಿದೆ.

ಇದರನ್ವಯ **2014-15ನೇ** ಸಾಲಿನಲ್ಲಿ ನಿಗದಿಪಡಿಸಿದ ಗುರಿಗಳನ್ವಯ, 2015-16ನೇ ಸಾಲಿನಲ್ಲಿ SCP/TSP/ ಸಾಮಾನ್ಯ ವರ್ಗದಡಿ ನಿರ್ಮಿಸಲಾದ ಅನಿಲ ಸ್ಥಾವರಗಳ ರಾಜ್ಯ ಸಹಾಯಧನ ಬಾಕಿ ಪಾವತಿಗಾಗಿ ರೂ.60.00ಲಕ್ಷಗಳನ್ನು ಮೇಲೆ ಓದಲಾದ ಆದೇಶದಲ್ಲಿ ಬಿಡುಗಡೆ ಮಾಡಿದೆ.

**2015-16ನೇ** ಸಾಲಿನಲ್ಲಿ, **ಅನಿಲ ಯೋಜನೆಯಡಿ** ನಿಗದಿಪಡಿಸಿದ ಅನುದಾನದ ಪೈಕಿ ಬಿಡುಗಡೆಗೆ ಬಾಕಿ ಉಳಿದ ರೂ.60.00ಲಕ್ಷಗಳನ್ನು **2014-15ನೇ** ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ರಾಜ್ಯ ಸಹಾಯಧನ ಬಾಕಿ ಪಾವತಿಗಾಗಿ ಬೆಂಗಳೂರು(ಗ್ರಾ), ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲಾ ಪಂಚಾಯತ್‌ಗಳಿಗೆ **ಲೆಕ್ಕ ಶೀರ್ಷಿಕೆ 2810-01-198-1-01-300**ರಡಿ ಅಗತ್ಯತೆಯನುಸಾರ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/53/ಜೈಅಯೋ/2015, ಬೆಂಗಳೂರು, ದಿನಾಂಕ 19.01.2016**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2015-16ನೇ** ಸಾಲಿನಲ್ಲಿ, 2014-15ನೇ ಸಾಲಿಗೆ ಸಂಬಂಧಿಸಿದಂತೆ ನಿರ್ಮಿಸಲಾದ ಅನಿಲ ಸ್ಥಾವರಗಳ ರಾಜ್ಯ ಸಹಾಯಧನ ಬಾಕಿ ಪಾವತಿಗಾಗಿ ಅನಿಲ ಯೋಜನೆಯಡಿ **ರೂ.60.00**ಲಕ್ಷ(ಅರವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಅಗತ್ಯತೆಯನುಸಾರ ಕೆಳಕಂಡ ಜಿಲ್ಲೆಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ

| ಕ್ರ.ಸಂ | ಜಿಲ್ಲೆ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | ಬೆಂಗಳೂರು(ಗ್ರಾ) | 6.60 |
| 2. | ಬೆಳಗಾವಿ | 41.00 |
| 3. | ದಕ್ಷಿಣ ಕನ್ನಡ | 9.88 |
| 4 | ಹಾಸನ | 2.52 |
| | ಒಟ್ಟು | **60.00** |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದ್ಧಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. **ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು.**

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-01-198-1-01-300**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ **ಸಂಖ್ಯೆ : ಆಇ 386 ವೆಚ್ಚ-6/2015 ದಿನಾಂಕ 11.01.2016** ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು(ಗ್ರಾ), ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಹಾಸನ,
3. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು(ಗ್ರಾ), ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಹಾಸನ,
4. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರದಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.